

ಕುಣಿಯುತ್ತಲೇ ಇರುತ್ತಾರೆ. ಚರ್ಮವಾದ್ಯ ಬಿಡುವಿಲ್ಲದೇ ಬಡಿಯುತ್ತಾ ಬೆವರು ಬಸಿಯುವ ತನಕ ಕುಣಿದು ಸಂಭ್ರಮಿಸುತ್ತಾರೆ.

ರೊಟ್ಟಿ ಹಬ್ಬದಲ್ಲಿ ಬಹುಪಾಲು ಸೋಲಿಗರು ತಮ್ಮ ಕುಲದೈವ ಬಿಲ್ಲಯ್ಯ ಮತ್ತು ಕಾರಯ್ಯನನ್ನು ಪೂಜಿಸುತ್ತಾರೆ. ಕೆಲವು ಕಡೆ ಕೊಂಬಿನ ಬಸಣ್ಣ, ಜಡೇಸ್ವಾಮಿ, ಮಾದೇಶ್ವರ ಮತ್ತು ಬಿಳಿಗಿರಿ ರಂಗನಾಥನಿಗೂ ಪೂಜೆ ಸಲ್ಲುತ್ತದೆ. ಬಿಲ್ಲಯ್ಯ ಮತ್ತು ಕಾರಯ್ಯ ಎನ್ನುವುದು ಮಾದಪ್ಪನ ಹೆಸರುಗಳು ಎನ್ನುವ ನಂಬಿಕೆ ಇದೆ. ರೊಟ್ಟಿ ಹಬ್ಬದ ಸಂಜೆ ಈ ಕುಲದ ಒಬ್ಬರಿಗೆ ದೇವರು ಮೈಮೇಲೆ ಬರುತ್ತದೆ. ತಮ್ಮ ಕಷ್ಟ ಕಾರ್ಪಣ್ಯ, ಭವಿಷ್ಯ, ಶಕುನಗಳನ್ನು ಈ ವೇಳೆ ವಿಚಾರಿಸಲಾಗುತ್ತದೆ. ಒಂದೂರಿಂದ ಒಂದೂರಿಗೆ ದೇವರ ಉತ್ಸವ ಬರುತ್ತದೆ.

## ಕಲ್ಲೇಟಿಗಿಂತ ಕಣ್ಣೇಟು ಜೋರಾಗಿ...

ರೊಟ್ಟಿ ಹಬ್ಬವನ್ನು ಈ ಕುಲದ ಮುಖ್ಯಸ್ಥ ಹಿರೀಕ ನಿರ್ಧರಿಸುತ್ತಾನೆ. ಯಾವ ಪೋಡಿನಲ್ಲಿ ಯಾವ ದಿನ ರೊಟ್ಟಿಹಬ್ಬ ನಡೆಯಬೇಕು ಎನ್ನುವುದನ್ನು ಈತನೇ ನಿಶ್ಚಯಿಸುತ್ತಾನೆ. ಊರಿನ ಹಿರಿಯರು ಕೂತು ರೊಟ್ಟಿಹಬ್ಬದ ದಿನವನ್ನು ನಿರ್ಧರಿಸಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಒಂದು ಪೋಡಿನ ರೊಟ್ಟಿ ಹಬ್ಬಕ್ಕೆ ಇನ್ನೊಂದು ಪೋಡಿನವರು ಬರಬಹುದು. ಅವರಿಗೆ ಆಹ್ವಾನವೂ ಹೋಗಿರುತ್ತದೆ. ಹೀಗೆ ರೊಟ್ಟಿ ಹಬ್ಬಕ್ಕೆ ಬರುವ ಹದಿಹರೆಯದ ಸೋಲಿಗ ತರುಣರಿಗೆ ಯುವತಿಯರಿಗೆ ಈ ಹಬ್ಬ ಬಹುಮಹತ್ವದ್ದು.

ರೊಟ್ಟಿ ಹಬ್ಬದ ಸಂದರ್ಭದಲ್ಲಿಯೇ ಸೋಲಿಗರ ವಿವಾಹಗಳೂ ಜರುಗುತ್ತವೆ. ಸೋಲಿಗರು ಇದನ್ನು 'ಕೂಡಾವಳಿ' ಎಂದು ಕರೆಯುತ್ತಾರೆ. ಒಬ್ಬಳು ಸೋಲಿಗರ ಹುಡುಗಿಗೆ ಕುಣಿಯುವವರ ಪೈಕಿಯ ಒಬ್ಬ ಹುಡುಗ ಇಷ್ಟ ಎಂದಾದರೆ ಹುಡುಗಿ ಹುಡುಗನಿಗೆ ಕಲ್ಲಿನಲ್ಲಿ ಹೊಡೆಯುತ್ತಾಳೆ. ಮೂರು ಸಲ ಕಲ್ಲಲ್ಲಿ ಹೊಡೆದಳು ಎಂದಾದರೆ ಆ ಜೋಡಿಯ ಮದುವೆ ನಿಶ್ಚಯ ಎಂದರ್ಥ. ರೊಟ್ಟಿಹಬ್ಬ ಮುಗಿದ ನಂತರ ಅವರಿಬ್ಬರೂ ಒಂದು ವಾರ ಕಾಡೊಳಗೆ ಕಳೆದುಹೋಗುತ್ತಾರೆ. ಹಾಗೆ ನಾಪತ್ತೆಯಾಗಿ ವಾರದ ತನಕ ಅವರಿಬ್ಬರು ಕಾಡಿನೊಳಗೆ ಅಜ್ಞಾತ ಸಂಸಾರ (ಕೂಡಾವಳಿ) ನಡೆಸಬೇಕು. ಇದು ಸೋಲಿಗರು ತಲೆತಲೆಮಾರುಗಳಿಂದ ನಡೆಸಿಕೊಂಡು ಬಂದ ಕಟ್ಟಳೆ.

ತನ್ನ ಪ್ರೇಯಸಿಯನ್ನು ಕಾಡಿಗೆ ಕರೆದುಕೊಂಡ ಹೋದ ಹುಡುಗ ತನ್ನೊಂದಿಗೆ ಬಂದ ಹುಡುಗಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಸಂಸಾರ ಜವಾಬ್ದಾರಿಯ ಡೆಮೋ ಇದು. ಅದು ಅವನ ಮತ್ತು ಅವಳ ಪಾಲಿನ ಸತ್ವಪರೀಕ್ಷೆಯ ಸಮಯ. ಒಮ್ಮೆ ಕಾಡು ಹೊಕ್ಕ ಜೋಡಿ ವಾಪಾಸ್ ಮನೆಗೆ ಪ್ರವೇಶಿಸುವಂತಿಲ್ಲ. ಕಷ್ಟವೋ ಸುಖವೋ ಕಾಡುಗೆಣಸು, ಹಣ್ಣು ಹಂಪಲು ತಿಂದು ಬದುಕಬೇಕು. ಕಾಡಿನಲ್ಲಿ ಪ್ರೇಮಿ ತನ್ನ ಪ್ರೇಯಸಿಗೆ ಬಾಲದಂಡೆ ಹಕ್ಕಿಯ ಪುಕ್ಕವನ್ನು ಅಥವಾ ಗರಿಯನ್ನು (ಇಂಡಿಯನ್ ಪ್ಯಾರಡೈಸ್ ಫ್ಲೈ ಕ್ಯಾಚರ್) ಉಡುಗೊರೆಯಾಗಿ ಹುಡುಕಿ ತಂದುಕೊಟ್ಟು ತನ್ನ ಪ್ರೇಮವನ್ನು ನಿವೇದಿಸಿಕೊಳ್ಳಬೇಕು. ಆಗ ಮಾತ್ರ ಸೋಲಿಗ ಯುವತಿ ಪ್ರೇಮವನ್ನು ಅಂಗೀಕರಿಸುತ್ತಾಳೆ.

ವಾರ ಕಳೆದ ನಂತರ ಯಾರಾದರೂ ಹೋಗಿ ಊರಿನ ಮುಖಂಡರೆದುರಿಗೆ ಅವರನ್ನು ಕರೆದುಕೊಂಡು ಬಂದು ನಿಲ್ಲಿಸುತ್ತಾರೆ. ಇಬ್ಬರೂ ಪರಸ್ಪರ ಜೋಡಿಯಾಗಲು ಒಪ್ಪಿಗೆಯೇ ಎಂದು ಇಬ್ಬರನ್ನೂ ಕೇಳುತ್ತಾರೆ. ಹುಡುಗ ಹುಡುಗಿಯನ್ನು ಸಾಕಬಲ್ಲನೇ ಇಲ್ಲವೇ ಎಂಬುದನ್ನು ನೋಡಿಕೊಂಡು ಹಿರಿಯರು ಮದುವೆಯನ್ನು ನಿಶ್ಚಯಿಸುತ್ತಾರೆ; ನಂತರ ಮದುವೆಯಾಗುತ್ತದೆ. ಸೋಲಿಗ ಸಂಪ್ರದಾಯದ ಪ್ರಕಾರ ವರನ ಕಡೆಯವರು ವಧುವಿಗೆ ಒಂದೂಕಾಲು ರೂಪಾಯಿಯನ್ನು ವಧುದಕ್ಷಿಣೆ ಎಂದು ಕೊಡಬೇಕು.

ಇಂದಿಗೂ ತಮ್ಮನ್ನು ತಾವು ಕಾಡಿನ ಮಕ್ಕಳೆಂದು ಭಾವಿಸುವ ಸೋಲಿಗರ ಪ್ರಪಂಚ ವಿಶಿಷ್ಟವಾದುದುದು. ತಮಗೆ ಗೊತ್ತಿರುವ ಮತ್ತು ಪರಿಚಿತ ಜನರನ್ನು ಮಾತ್ರ ಅವರು ರೊಟ್ಟಿ ಹಬ್ಬದಲ್ಲಿ ಸೇರಿಸಿಕೊಳ್ಳುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in


